<u>ಸಾಕ್ಷಿಯನ್ನು ದಿಃ20.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಬಿ ಎಲ್ ಎಸ್ ವಕೀಲರಿಂದಃ</u>**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಆದರೆ ಇಂಗ್ಲಿಷ್ ಭಾಷೆ ಓದಲು ಬರೆಯಲು ಅಷ್ಟು ಸುಲಭವಾಗಿ ಬರುವುದಿಲ್ಲ. ಈ ದಾವೆಯನ್ನು ಕೇವಲ ಒಬ್ಬ ವ್ಯಕ್ತಿ ಮೇಲೆ ಸಲ್ಲಿಸಿದ್ದೇನೆ. ಈ ದಾವೆಯನ್ನು ಲಕ್ಷ್ಮಿ ಪತಿಯಪ್ಪನ ಮೇಲೆ ಬಿಟ್ಟು ಬೇರೆ ಯಾರ ಮೇಲೆ ಸಲ್ಲಿಸಿಲ್ಲ. ಲಕ್ಷಿ ಪತಿಯಪ್ಪ 2017 ರಲ್ಲಿ ಮೃತ ಪಟ್ಟಿದ್ದಾನೆ. ಆತನ ವಾರಸುದಾರರು ಯಾರು ಇಲ್ಲ. ಸಾಕ್ಷಿ ಮುಂದುವರೆದು ಲಕ್ಷ್ಮಿ ಪತಿಯಪ್ಪನಿಗೆ ಮೂರು ಜನ ಹೆಣ್ಣು ಮಕ್ಕಳು ಇದ್ದು ಅವರೆಲ್ಲರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಅವರನ್ನು ಹೊರತು ಪಡಿಸಿ ಬೇರೆ ಯಾರು ಇರುವುದಿಲ್ಲ.

ದಾವೆಯ 1 ನೇ ಐಟಂ ಆಸ್ತಿಯು 4 ಎಕರೆ 10 ಗುಂಟೆ ಇರುತ್ತದೆ. ಆದರೆ ಸದರಿ ಜಮೀನಿನ ಚೆಕ್ಕು ಬಂದಿ ಹೇಳಲು ಆಗುವುದಿಲ್ಲ. 1 ನೇ ಐಟಂ ಆಸ್ತಿಯು ಸುನಂದಮ್ಮನ ಹೆಸರಿನಲ್ಲಿ ಖಾತೆ ಇರುತ್ತದೆ. ಲಕ್ಷ್ಮಿ ಪತಿಯಪ್ಪನ ಮಗನಿಂದ ಸುನಂದಮ್ಮನ ಹೆಸರಿಗೆ ಖಾತೆಯಾಗಿರುತ್ತದೆ. ಸುನಂದಮ್ಮನಿಗೆ ವಾರಸನಾತೆಯಿಂದ ಆತನ ಗಂಡ ನರಸಿಂಹ ಮೂರ್ತಿಯಿಂದ ಖಾತೆಯಾಗಿರುತ್ತದೆ. ಸರ್ವೆ ನಂ. 16/2 ಲಕ್ಷ್ಮಿಪತಿಯಪ್ಪ 2 ನೇ ಪ್ರತಿವಾದಿಗೆ ಆ ಜಮೀನು ಮಾರಾಟ ಮಾಡಿದ್ದಾನೆ. ಲಕ್ಷ್ಮಿ ಪತಿಯಪ್ಪ ಸರ್ವೆ ನಂ.16/2 ರಲ್ಲಿ 3 ಎಕರೆ ಜಮೀನು ಮಾರಾಟ ಮಾಡಿದ್ದಾನೆ. ಸರ್ವೆ ನಂ.16/2 ಒಟ್ಟು 2 ಎಕರೆ 33 ಗುಂಟೆ ಇರುತ್ತದೆ.

ಸರ್ವೆ ನಂ.16/3, 6 ಎಕರೆ 16 ಗುಂಟೆ ಜಮೀನು 1 ನೇ ಪ್ರತಿವಾದಿ ಲಕ್ಷ್ಮಿಪತಿಯಪ್ಪನ ಹೆಸರಿನಲ್ಲಿಯೇ ಖಾತೆ ಇರುತ್ತದೆ. ಸದರಿ ಜಮೀನು 2 ಎಕರೆ 33 ಗುಂಟೆ ಇರುತ್ತದೆ. ದಾವ ಐಟಂ ನಂ.4 ಅಂದರೆ ಸರ್ವೆ ನಂ.11/2, 4 ಎಕರೆ 8 ಗುಂಟೆ ಇರುತ್ತದೆ.

ಸದರಿ ಜಮೀನು ಈಗ 3 ನೇ ಪ್ರತಿವಾದಿ ನಾಗವೇಣಿ ಹೆಸರಿಗೆ ಖಾತೆ ಇರುತ್ತದೆ. ನಾಗವೇಣಿ ಹೆಸರಿಗೆ ಅವರ ತಂದೆ ಬರೆದುಕೊಟ್ಟ ಆಧಾರದ ಮೇಲೆ ಖಾತೆಯಾಗಿರುತ್ತದೆ.

ಹೊಟ್ಟೆ ಕರಿಯಪ್ಪ ನನ್ನ ತಂದೆಯ ದೊಡ್ಡಪ್ಪನಾಗಿದ್ದು ಪರಿಚಯವಿದ್ದಾರೆ. ಹೊಟ್ಟೆಕರಿಯಪ್ಪ ಮತ್ತು ಉಗ್ರಪ್ಪನ ತಂದೆ ಹೆಸರು ದಾಸಪ್ಪ ಎಂದರೆ ಸರಿ. ಸದರಿ ಹೊಟ್ಟೆ ಕರಿಯಪ್ಪನಿಗೆ ಆಸ್ತಿ ಇತ್ತು. ದಾವೆಯ 2 ನೇ ಐಟಂ ಆಸ್ತಿ ಸರ್ವೆ ನಂ.16/2 ಮೊದಲು ಹೊಟ್ಟೆ ಕರಿಯಪ್ಪನ ಆಸ್ತಿ ಅನ್ನುವುದು ಸರಿ. ಸದರಿ ಹೊಟ್ಟೆ ಕರಿಯಪ್ಪನಿಗೆ ಪಾಲಮ್ಮ ಮತ್ತು ತಿಮ್ಮಕ್ಕ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಹೊಟ್ಟೆ ಕರಿಯಪ್ಪ ಮತ್ತು ಆತನ ಇಬ್ಬರು ಹೆಣ್ಣು ಮಕ್ಕಳು ಮೃತ ಪಟ್ಟಿರುತ್ತಾರೆ. ಹಾಲಮ್ಮ ಮತ್ತು ತಿಮ್ಮಕ್ಕ ಯಾವ ಇಸವಿಯಲ್ಲಿ ಮೃತ ಪಟ್ಟಿದ್ದಾರೆ ಎಂದು ಗೊತ್ತಿಲ್ಲ. ಹೊಟ್ಟೆ ಕರಿಯಪ್ಪನಿಗೆ ಷಣ್ಮುಖ ಮೊಮ್ಮಗನಾಗಬೇಕು. ಸದರಿ ಷಣ್ಮುಖ ಹೊಟ್ಟೆ ಕರಿಯಪ್ಪನ ಮಗಳು ತಿಮ್ಮಕ್ಕನ ಮಗ ಅಂದರೆ ಮೊಮ್ಮಗನಾಗಬೇಕು. ಸದರಿ ಷಣ್ಮುಖಪ್ಪ ಈ ದಾವೆಯ 4 ನೇ ಪ್ರತಿವಾದಿ ಇರುತ್ತಾನೆ. ಸದರಿ ಷಣ್ಮುಖಪ್ಪ ದಾವೆಯ 2 ನೇ ಐಟಂ ಗೆ ಸಂಪೂರ್ಣ ಮಾಲೀಕ ಮತ್ತು ವಾರಸುದಾರ ಎಂದರೆ ಸರಿಯಲ್ಲ. ಸದರಿ ಷಣ್ಮುಖಪ್ಪ ದಾವಾ 2 ನೇ ಐಟಂ ಆಸ್ತಿ ಬೇಡ ಎಂದು ದಾಖಲೆಗೆ ಸಹಿ ಮಾಡಿದ್ದಾನೆ. ಸದರಿ ದಾಖಲೆ ನನ್ನ ಬಳಿ ಇದ್ದು ವಕೀಲರಿಗೆ ಕೊಟ್ಟಿದ್ದೇನೆ. ಸದರಿ ದಾಖಲೆಯು ನ್ಯಾಯಾಲಯದಲ್ಲಿ ಹಾಜರುಮಾಡಿದ್ದೇನೆ.

(**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು**).
ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.